"ರಬ್ಬರ್ ತೋಟದೊಳಗೆ ಪೀಡೆ, ರಣಪಿಶಾಚಿ ಇದೆಯಂತೆ. ನಿನ್ನೆ ರಾತ್ರಿ ಅಣ್ಣ ಕೌಡಿಚ್ಚಾರಿನಿಂದ ನಡಕೊಂಡು ಅಜ್ಜಿಕಲ್ಲಿನಲ್ಲಿ ಬೆಟ್ಟ ಏರುವಾಗ ಓಡಿಸಿಕೊಂಡೇ ಬಂತಂತೆ. ಬೆಲ್ಲ, ಅವಲಕ್ಕಿಯ ಕಟ್ಟನ್ನು ದಾರಿಯಲ್ಲೇ ಬಿಸಾಕಿ ನನ್ನಣ್ಣ ಓಡಿಕೊಂಡೇ ಮನೆಗೆ ಬಂದ. ಇನ್ನು ನಾವು ಕೌಡಿಚ್ಚಾರು, ಪುತ್ತೂರು ಕಡೆ ಹೋಗುವುದಾದರೂ ಹೇಗೆ?''

ಸೋಂಪ ಮರದಡಿಯಲ್ಲಿ ಪ್ರಲಾಪಿಸಿದಾಗ ನಾನು ಗೇರುಮರದ ತುದಿಯಲ್ಲಿದ್ದೆ. ನನಗೆ ಮೊದಲೇ ಸ್ವಲ್ಪ ಅನುಮಾನ ಇತ್ತು. ಆಚಾರಿಮೂಲೆಯ ಬಳ್ಳು ಇದನ್ನೇ ಮೊನ್ನೆ ಮೊನ್ನೆ ಅಪ್ಪಯ್ಯನಿಗೂ ಹೇಳಿದ್ದನಂತೆ. ''ರಣವೂ ಇಲ್ಲ. ಪೀಡೆಯೂ ಇಲ್ಲ. ಅದೆಲ್ಲಾ ಲೊಟ್ಟೆ ಸುದ್ದಿ. ನಾನೀಗ ದಿನಾ ಸಂಜೆ–ರಾತ್ರಿ ಅಲ್ಲೇ ನಡೆದು ಮನೆಗೆ ಬರುವುದಿಲ್ಲವೋ. ಯಾವತ್ತೂ ನಾನು ಭೂತ ನೋಡೇ ಇಲ್ಲ'' ಎಂದು ಬಳ್ಳುವಿಗೆ ಸಮಜಾಯಿಸಿದೆ ಎಂದ್ರು ಅಪ್ಪಯ್ಯ.

'ರಣವೋ ದೆವ್ವವೋ, ಭೂತವೋ ಹೇಗಿತ್ತತಂತೆ? ನಿನ್ನಣ್ಣ ನೋಡಿದ್ರಂತೆಯಾ? ಅಜ್ಜಿಕಲ್ಲಿನಲ್ಲಿ ಮಾತ್ರ ಇದ್ದದ್ದ?' ಈ ಯಾವುದಕ್ಕೂ ಸ್ಪಷ್ಟ ಉತ್ತರ ಸೋಂಪನಲ್ಲಿರಲಿಲ್ಲ. ಸೋಂಪನ ಅಣ್ಣ ನಿಜವಾಗಿಯೂ ನೋಡಿರಬಹುದಾ? ಬಳ್ಳು ಅದೇ ಅಜ್ಜಿಕಲ್ಲು ಗುಡ್ಡೆಯ ಬುಡದಲ್ಲೇ ಪುಟ್ಟ ತೋಟ–ಮನೆ ಕಟ್ಟಿಕೊಂಡು ಬದುಕುವ ಅಜ್ಜ. ಅವರ ಮಾತಿನಲ್ಲಿ ಸತ್ಯ ಇರಬಹುದಾ? ಮತ್ತೆ ಅಪ್ಪಯ್ಯ ಯಾಕೆ ನಂಬುವುದಿಲ್ಲ? ಏರಡ್ಕದ ಕಡ್ಪಕಲ್ಲಿನ ಮೇಲೆ ಕೂತು ನಮ್ಮ ನಮ್ಮಲ್ಲೇ ಒಂದಷ್ಟು ಚರ್ಚೆಗಳಾದುವು. ಅವತ್ತಿನಿಂದ ಅಜ್ಜಿಕಲ್ಲು ಭೂತ ಗಂಭೀರವಾಗಿ ನನ್ನ ತಲೆ ತಿನ್ನತೊಡಗಿತು.

ಭಾರತ ಸರಕಾರ ನಮ್ಮೂರ ಬೆನ್ನಿಗೆ ಅಂಟಿಕೊಂಡಿದ್ದ ಸಾವಿರಾರು ಎಕರೆ ಕಾಡನ್ನು ಕಡಿದು ಮರಮಟ್ಟುಗಳಿಗೆ ಬೆಂಕಿಯಿಟ್ಟು ಸುಟ್ಟು ಆ ಬೋಳು ಗುಡ್ಡದ ಮೇಲೆ ರಬ್ಬರ್ ಬೆಳೆಸಿದ ಕತೆಯನ್ನು ಈ ಹಿಂದೆಯೇ ಹೇಳಿದ್ದೆ. ಕೌಡಿಚ್ಚಾರು, ಕಾವು, ಐವರ್ನಾಡು, ಕಣಿಯಾರು, ಕೊಳ್ತಿಗೆ ಇಲ್ಲೆಲ್ಲಾ ಸಮೃದ್ಧವಾಗಿದ್ದ ಕಾಡನ್ನು 70ರ ದಶಕದಲ್ಲಿ ಸರಕಾರ ಬೋಳಿಸಿತು. ಆವರೆಗೆ ನಮ್ಮೂರ ಜನ ರಬ್ಬರ್ ಗಿಡ, ಕೃಷಿಯನ್ನು ನೋಡಿದವರಲ್ಲ. ಕಣಿಯಾರುಮಲೆ ರಕ್ಷಿತಾರಣ್ಯದ ನಡುವೆ ಹುದುಗಿದ್ದ ಪುಟ್ಟ ಊರು ದೇರ್ಲ–ಇಳಂತಾಜೆಯ ಎರಡೂ ಭಾಗಕ್ಕೆ ಗೋಡೆಯಂತಿದ್ದ ಸಾವಿರಾರು ಎಕ್ರೆ ಕಾಡು ಹೀಗೆ ಸುಟ್ಟುಹೋದ ಮೇಲೆ ಬೆನ್ನಿ ಬೇಸಾಯವನ್ನೇ ನಂಬಿ ಬದುಕುವ ಹಳ್ಳಿಮಂದಿಗೆ ತಮ್ಮ ಊರು ಅಂಗವಿಕಲಗೊಂಡಂತೆ ಭಾಸವಾಗತೊಡಗಿತು. ಸರಕಾರದ ವಿರುದ್ಧ ಗುಂಪಾಗಿ ಪ್ರತಿಭಟಿಸುವ ದಮ್ಮು ರೈತನಲ್ಲಿ ಇರಲಿಲ್ಲ. ಇಲ್ಲೆಲ್ಲಾ ಮತ್ತೆ ರಬ್ಬರ್ ಕೃಷಿಯಾಗುತ್ತದೆ, ಅದೂ ಒಂದು ರೀತಿ ಕಾಡೇ. ನಿಬಿಡ ದಟ್ಟ ಹಸಿರು ಮತ್ತೆ ಅದೇ ಜಾಗದಲ್ಲಿ ತುಂಬಿಕೊಳ್ಳುತ್ತದೆ, ನಿಮಗೇಕೆ ಭಯ ಎಂದೆಲ್ಲಾ ಗಾರ್ಡ್, ಫಾರೆಸ್ಟ್‌ಗಳು ಸಬೂಬು ಹೇಳಿ ಪ್ರತಿಭಟನೆಯ ಸೊಲ್ಲುಗಳನ್ನು ಬುಡದಲ್ಲೇ ಚಿವುಟಿ ಸರಿ ಮಾಡಿದ್ರು.

ಪುಣ್ಯಕ್ಕೆ ಇಳಂತಾಜೆಯ ಊರಿಗೆ ತಾಗಿಕೊಂಡಂತೆ ಇದ್ದ ಮನೋಳಿ ಕಾಡು ಮಾತ್ರ ಹಾಗೆಯೇ ಉಳಿದಿತ್ತು. ಮನೋಳಿ ಕಾಡಿಗೆ ನಾನು ಆವಾಗಲೇ ಪ್ರವೇಶಿಸಿದ್ದೆ. ಬಹಳ ದುರ್ಗಮ ಕಾಡೇನಲ್ಲ. ಕಟ್ಟಿಗೆ, ಸೊಪ್ಪು ಸದೆಗೆಂದು ಅಮ್ಮನೊಂದಿಗೆ ಆಗಾಗ ಹೋಗುತ್ತಿದ್ದೆ. ಆ ಕಾಡೊಳಗೆ ಪ್ರವೇಶಿಸಿ ಒಂದು ಫರ್ಲಾಂಗು ಮುಂದುವರಿದಾಗ ಕಾಡು ದುರ್ಗಮ, ಕತ್ತಲೆಗೊಳ್ಳುವ ಬಾಗಿಲಲ್ಲೇ ಪ್ರಾಚೀನ ದೈವ–ಭೂತದ ಗುಡಿಯೊಂದರ ಕುರುಹು ಇದೆ. ಹಿಂದೆ ಅಲ್ಲಿ ಮನೆ ಇತ್ತಂತೆ. ಆ ಕಾರಣಕ್ಕೆ ಊರ ಗ್ರಾಮದೈವದ ಗುಡಿ ಅಲ್ಲಿತ್ತು. ಅದೆಲ್ಲಾ ಬಿದ್ದು ಹೋದ ಮೇಲೆ ಆ ಭೂತಕ್ಕೆ ನೇಮವಿಲ್ಲ, ದೈವವನ್ನು ಪುನರ್ ಸ್ಥಾಪಿಸುವ ಪ್ರಯತ್ನ ಆಗಿಲ್ಲ, ಆ ದೈವ ಅಂತರ್‌ಪಿಶಾಚಿಯಾಗಿ ಇಲ್ಲೆಲ್ಲಾ ತಿರುಗಾಡುತ್ತದೆ ಎಂದೆಲ್ಲಾ ಅದೇ ಹಾದಿಯಲ್ಲಿ ಊರೊಟ್ಟಿನ ಜನರೊಂದಿಗೆ ಕಾಡಿಗೆ ಹೋಗುವಾಗ ಬೇರೆ ಬೇರೆಯವರು ಹೇಳುವುದನ್ನು ಕೇಳಿದ್ದೆ. ಅದೇ ಜಾಗದಲ್ಲಿ ಒಂದು ಒರತೆ ನೀರಿನ ಗುಂಡಿ ಅದಕ್ಕೆ ತಾಗಿಕೊಂಡಂತೆ ದೊಡ್ಡದೊಂದು ಅಬ್ರುಕೆ ಮರವೂ ಇತ್ತು. ಕಾಡು ಏರುವಾಗ, ಇಳಿಯುವಾಗ ಆ ಜಾಗದಲ್ಲಿ